ಕರ್ನಾಟಕ ಸರ್ಕಾರ
# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
Government of Karnataka
# Karnataka Residential Educational Institutions Society
(An Organisation of Govt. of Karnataka)

ಕವಶಿಸಸ/ಆಡಳಿತ/ಸಿಬ್ಬಂದಿ/ಸಿಆರ್–/2021–22 ದಿನಾಂಕ: 25.05.2022

## ಅಧಿಕೃತ ಜ್ಞಾಪನ

ವಿಷಯ: 2022–23ನೇ ಸಾಲಿನಲ್ಲಿ ಸಂಘದ ವಸತಿ ಶಾಲೆ/ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ ಬೋಧಕ/ಬೋಧಕೇತರ ಸಿಬ್ಬಂದಿಗಳ ಸಾರ್ವತ್ರಿಕ ವರ್ಗಾವಣೆ ಮಾಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ : ಸಕಇ 308 ಎಂಡಿಎಸ್ 2022, ದಿ:05.05.2022
2. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 16 ಸೇನೌವ 2022 ದಿ: 30.04.2022
3. ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ದಿನಾಂಕ: 24.05.2022
4. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ ಸಕಇ 308 ಎಂಡಿಎಸ್ ದಿ:24.05.2022
5. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ ಸಕಇ 308 ಎಂಡಿಎಸ್ ದಿ:25.05.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ 2022–23 ನೇ ಸಾಲಿನ ಸಾರ್ವತ್ರಿಕ ವರ್ಗಾವಣಾ ಮಾರ್ಗಸೂಚಿಯನ್ನು ಉಲ್ಲೇಖ(1) ರ ಸರ್ಕಾರದ ಆದೇಶದೊಂದಿಗೆ ಹೊರಡಿಸಲಾಗಿರುತ್ತದೆ.

ಉಲ್ಲೇಖ (2) ರ ಸರ್ಕಾರದ ಆದೇಶದಲ್ಲಿ 2022–23 ನೇ ಸಾಲಿನಲ್ಲಿ ದಿನಾಂಕ 01.05.2022 ರಿಂದ 15.06.2022 ರೊಳಗೆ ಸಾರ್ವತ್ರಿಕ ವರ್ಗಾವಣೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಆದೇಶಿಸಲಾಗಿರುತ್ತದೆ.

ಉಲ್ಲೇಖ(1)ರ ಸರ್ಕಾರದ ಸಾರ್ವತ್ರಿಕ ವರ್ಗಾವಣಾ ಮಾರ್ಗಸೂಚಿಯನ್ವಯ ದಿನಾಂಕ: 25.05.2022ರ ಬೆಳಿಗ್ಗೆ 10.30 ರಿಂದ ದಿನಾಂಕ 28.05.2022 ರ ಸಂಜೆ 5.30 ರವರೆಗೆ ಸಂಘದ ಎಸ್.ಎಂ.ಎಸ್ ತಂತ್ರಾಂಶದಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ವಿಧಾನ, ಸಲ್ಲಿಸಬೇಕಾಗಿರುವ ದಾಖಲೆಗಳ ಬಗ್ಗೆ ನಿರ್ದೇಶನಗಳನ್ನು ಉಲ್ಲೇಖ(3)ರ ಈ ಕಛೇರಿ ಅಧಿಕೃತ ಜ್ಞಾಪನದಲ್ಲಿ ನೀಡಿ, ಸಂಘಧ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಉಲ್ಲೇಖ(4) ಮತ್ತು (5)ರಲ್ಲಿ ಉಲ್ಲೇಖ(1) ವರ್ಗಾವಣೆ ಮಾರ್ಗಸೂಚಿಗೆ ಸರ್ಕಾರ ತಿದ್ದುಪಡಿ ಆದೇಶಗಳನ್ನು ಹೊರಡಿಸಲಾಗಿದೆ. (ಪ್ರತಿಗಳನ್ನು ಲಗತ್ತಿಸಿದೆ)

ಉಲ್ಲೇಖ(3) ರ ದಿನಾಂಕ 24.05.2022 ರ ಈ ಕಛೇರಿ ಅಧಿಕೃತ ಜ್ಞಾಪನದ ನಿರ್ದೇಶನಗಳು ಸೇರಿದಂತೆ, ತಿದ್ದುಪಡಿ ಮಾರ್ಗಸೂಚಿಗಳನ್ವಯ ವರ್ಗಾವಣೆಗೆ ಅರ್ಜಿ ಸಲ್ಲಿಸುವಾಗ ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿರುತ್ತದೆ.

1. ಪತಿ ಪತ್ನಿ ಪ್ರಕರಣದಲ್ಲಿ ವರ್ಗಾವಣೆಗೆ ಅರ್ಜಿಸಲ್ಲಿಸುವ ಸಿಬ್ಬಂದಿಗಳು ಒಂದು ಕರ್ತವ್ಯದ ಸ್ಥಳದಿಂದ ಇನ್ನೊಬ್ಬರ ಕರ್ತವ್ಯದ ಸ್ಥಳಕ್ಕೆ ಸಾರ್ವಜನಿಕ ಸಾರಿಗೆ ಪ್ರಯಾಣದ ಅಂತರದ ಅವಧಿಯು ಒಂದು ಗಂಟೆಯ ಮಿತಿಯನ್ನು ಮೀರಿದ್ದಲ್ಲಿ ಅಂತಹ ಪ್ರಕರಣವನ್ನು ಪರಿಗಣಿಸಲು ಆದೇಶಿಸಿದ್ದು, ನೌಕರ ತನ್ನ ಪತಿ/ಪತ್ನಿ ತಾನು ಕರ್ತವ್ಯ ನಿರ್ವಹಿಸುತ್ತಿರುವ ವಸತಿ ಶಾಲೆಯಿಂದ ಒಂದು ಗಂಟೆಯ ಮೀತಿಯೊಳಗೆ ಇರುವ ಬಗ್ಗೆ ವರ್ಗಾವಣೆ ಬಯಸುವ ಸಿಬ್ಬಂದಿ ಸ್ವಯಂ ದೃಢೀಕರಣ ಪತ್ರವನ್ನು ಪ್ರಾಂಶುಪಾಲರಿಗೆ ಸಲ್ಲಿಸುವುದು. ಸದರಿ ದೃಢೀಕರಣ ಪತ್ರವನ್ನು ಆಯಾ ವಸತಿ ಶಾಲೆಗಳ ಪ್ರಾಂಶುಪಾಲರು (Google Map) ಆನ್‌ಲೈನ್‌ನಲ್ಲಿ ಪರಿಶೀಲಿಸಿ ದೃಢೀಕರಿಸಿ ಅರ್ಜಿ ಸಲ್ಲಿಸತಕ್ಕದ್ದು.

ನಂ. 8, ಎಂ.ಎಸ್.ಬಿ–1,6 & 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560052. ದೂರವಾಣಿ : 080-22283366, 22265755, 22204466, 22207722, ಟೆಲಿಫ್ಯಾಕ್ಸ್ : 080-22262288
# 8, M.S.B-1, 6th & 7th Floor, Cunningham Road, Bengaluru - 560052. Phone : 080-22283366, 22265755, 22204466, 22207722, Telefax : 080-22262288
E-mail : edkreis@rediff.com, Website : www.kreis.kar.nic.in

2. ಗಂಬೀರ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಅಧಿಕಾರಿ /ನೌಕರರಿಗೆ 30 ಅಂಕಗಳನ್ನು ಹೆಚ್ಚುವರಿಯಾಗಿ ನಿಗಧಿಪಡಿಸಿ ಪರಿಗಣಿಸಲು ಆದೇಶಿಸಿದ್ದು, ವಸತಿ ಶಾಲೆಗಳ ನೌಕರರು ಗಂಬೀರ ಖಾಯಿಲೆಯಿಂದ ಬಳಲುತ್ತಿದ್ದಲ್ಲಿ ಅಂತಹ ಸಿಬ್ಬಂದಿಗಳು ಸಕ್ಷಮ ಪ್ರಾಧಿಕಾರದಿಂದ ವೈಧ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

ಮೇಲ್ಕಂಡಂತೆ 2022-23ನೇ ಸಾಲಿನ ಮಾರ್ಗಸೂಚಿಯಲ್ಲಿ ನಿಗಧಿಪಡಿಸಿರುವ ಮಾನದಂಡಗಳನ್ವಯ ಉಲ್ಲೇಖ(3)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಸೂಚನೆಗಳನ್ನೂ ಅನುಸರಿಸಿ, ವರ್ಗಾವಣೆಗೆ ಅರ್ಜಿ ಸಲ್ಲಿಸಲು ದಿನಾಂಕ:31.05.2022ರ ವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ. ಕೌನ್ಸಿಲಿಂಗ್ ವೇಳಾಪಟ್ಟಿಯನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.

ಕಾರ್ಯನಿರ್ವಾಹಕ ನಿರ್ದೇಶಕರು

ಪ್ರತಿಯನ್ನು:

1. ಎಲ್ಲಾ ಜಿಲ್ಲೆಗಳ ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ
2. ಎಲ್ಲಾ ಜಿಲ್ಲೆಗಳ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಖೆ ರವರ ಮಾಹಿತಿಗಾಗಿ.
3. ಎಲ್ಲಾ ಜಿಲ್ಲೆಗಳ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ರವರ ಮಾಹಿತಿಗಾಗಿ.
4. ಪ್ರಾಂಶುಪಾಲರು. ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ಏಕಲವ್ಯ/ಶ್ರೀಮತಿ ಇಂದಿರಾಗಾಂಧಿ/ಡಾ॥ ಬಿ.ಆರ್ ಅಂಬೇಡ್ಕರ್ ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆ ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
5. ಎಲ್ಲಾ ವಸತಿ ಶಾಲೆಗಳ ಸಿಬ್ಬಂದಿಗಳಿಗೆ ಆಯಾ ವಸತಿ ಶಾಲೆಗಳ ಪ್ರಾಂಶುಪಾಲರ ಮುಲಕ
6. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ 308 ಎಂ.ಡಿ.ಎಸ್ 2022

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:11.05.2022

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ,
ಬೆಂಗಳೂರು.

ಇವರಿಗೆ:

ಕಾರ್ಯನಿರ್ವಾಹಕ ನಿರ್ದೇಶಕರು,
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,
ಬೆಂಗಳೂರು.

ಕ. ವ. ಶಿ. ಸ. ಸ.
ಬೆಂಗಳೂರು
11 MAY 2022
ಸ್ವೀಕೃತಿ
ದಿನಾಂಕ.......
ಸಹಿ.......

ಮಾನ್ಯರೇ,

ವಿಷಯ: 2022-23ನೇ ಸಾಲಿನ ವರ್ಗಾವಣೆ ಮಾರ್ಗಸೂಚಿಯನ್ನು ಹೊರಡಿಸಿರುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ:ಸಕಇ 308 ಎಂಡಿಎಸ್ 2022, ದಿನಾಂಕ:05.05.2022.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಶಾಲೆ/ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳ 2022-23ನೇ ವರ್ಗಾವಣೆಗೆ ಸಂಬಂಧಿಸಿದಂತೆ ದಿನಾಂಕ:05.05.2022ರಂದು ಆದೇಶವನ್ನು ಹೊರಡಿಸಲಾಗಿರುತ್ತದೆ. ಸದರಿ ಆದೇಶಕ್ಕೆ ಸಂಬಂಧಿಸಿದಂತೆ ದಿನಾಂಕ:09.05.2022 ಹಾಗೂ 10.05.2022 ರಂದು ಹೊರಡಿಸಿರುವ ವರ್ಗಾವಣೆ ಮಾರ್ಗಸೂಚಿಗಳನ್ನು ರದ್ದುಪಡಿಸಿ ದಿನಾಂಕ:11.05.2022 ರಂದು ಹೊರಡಿಸಿರುವ ಅಧಿಕೃತ ಮಾರ್ಗಸೂಚಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲಾಗಿದ್ದು, ದಿನಾಂಕ:11.05.2022ರ ಮಾರ್ಗಸೂಚಿಗಳಂತೆ ಕ್ರಮವಹಿಸುವಂತೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಶುಭಮಂಗಳ)
ಸರ್ಕಾರದ ಉಪ ಕಾರ್ಯದರ್ಶಿ-2 ,
ಸಮಾಜ ಕಲ್ಯಾಣ ಇಲಾಖೆ,

ಕ. ವ. ಶಿ. ಸಂ. ಸಂ.
ಕಚೇರಿ ಆಪ್ತಶಾಖೆ
ಸಂಖ್ಯೆ: 987
ದಿನಾಂಕ: 12/05/2022

ಜಂ.ನಿ. (ಆ) ಶಾಖೆ
ಸಂಖ್ಯೆ: 383
ದಿನಾಂಕ: 13/5/22

# ಸರ್ಕಾರದ ಆದೇಶ ಸಂಖ್ಯೆ: ಸಕಇ 308 ಎಂಡಿಎಸ್ 2022, ದಿನಾಂಕ:05.05.2022 ರ ಆದೇಶಕ್ಕೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಬರುವ ವಸತಿಶಾಲೆ/ಕಾಲೇಜುಗಳ ಬೋಧಕ/ಬೋಧಕೇತರ ಸಿಬ್ಬಂದಿಗಳ 2022-23 ನೇ ಸಾಲಿಗೆ ಸಂಬಂಧಿಸಿದಂತೆ ವರ್ಗಾವಣೆ ಮಾರ್ಗಸೂಚಿಗಳು, ದಿನಾಂಕ:11.05.2022

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ 826 ವಸತಿ ಶಾಲೆ/ಕಾಲೇಜುಗಳನ್ನು ನಡೆಸಲಾಗುತ್ತಿದ್ದು, ಇವುಗಳಲ್ಲಿ 2,13,540 ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಈ ವಸತಿ ಶಾಲೆ/ಕಾಲೇಜುಗಳಲ್ಲಿ, ಒಟ್ಟು 5,801 ಬೋಧಕರ ಮತ್ತು ಬೋಧಕೇತರ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಸರ್ಕಾರ ಪ್ರತಿಯೊಂದು ಹೋಬಳಿಯಲ್ಲಿ ವಸತಿ ಶಾಲೆ/ಕಾಲೇಜುಗಳನ್ನು ಪ್ರಾರಂಭಿಸಿರುತ್ತದೆ. ಸಂಘದ ಎಲ್ಲಾ ಸಿಬ್ಬಂದಿಗಳು ತಮ್ಮ ತಮ್ಮ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದಲ್ಲಿ ಮಾತ್ರ ಈ ಉದ್ದೇಶ ಈಡೇರಲಿದೆ. ಆದರೆ ಈ ಸಿಬ್ಬಂದಿಗಳ ವರ್ಗಾವಣೆಗಳನ್ನು, ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹಾಗೂ ನೌಕರರ ಸೇವಾ ಕಾರ್ಯಕ್ಷಮತೆ ಹೆಚ್ಚಿಸುವ ಹಿತದೃಷ್ಟಿಯಿಂದ ಹಾಗೂ ಪಾರದರ್ಶಕವಾಗಿ ಇರುವ ರೀತಿಯಲ್ಲಿ ಮಾಡಬೇಕಾಗಿದೆ. ಈ ಹಿನ್ನಲೆಯಲ್ಲಿ, ಸದರಿ ವಸತಿ ಶಾಲೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಮತ್ತು ವರ್ಗಾವಣೆಗಳನ್ನು ಪಾರದರ್ಶಕವಾಗಿ ಮಾಡಲು ಈ ಕೆಳಗಿನಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ/ಕಾಲೇಜುಗಳ ಎ,ಬಿ,ಸಿ,ಡಿ ವೃಂದದ ಖಾಯಂ ಸಿಬ್ಬಂದಿಗಳಾದ ಪ್ರಾಂಶುಪಾಲರು, ಬೋಧಕರು ಮತ್ತು ಬೋಧಕೇತರ ಸಿಬ್ಬಂದಿಯವರಿಗೆ ಅನ್ವಯವಾಗುವಂತೆ ವರ್ಗಾವಣೆ ಮಾರ್ಗಸೂಚಿ 2022-23 ನ್ನು ರಚಿಸಲಾಗಿದೆ.

| ಕ್ರ.ಸಂ | ಪದಗಳು | ವಿವರಣೆ |
|---|---|---|
| 1 | ಕನಿಷ್ಟ ಅರ್ಹತಾ ಅವಧಿ | ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ<br>1) ಎ ಮತ್ತು ಬಿ ಗ್ರೂಪ್ ನೌಕರರ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಕನಿಷ್ಟ 03 ವರ್ಷಗಳ ಅರ್ಹತಾ ಸೇವಾವಧಿಯನ್ನು ಪೂರೈಸಿರಬೇಕು.<br>2) ಸಿ ಗ್ರೂಪ್ ನೌಕರರು ವರ್ಗಾವಣೆಗೆ ಅರ್ಜಿಸಲ್ಲಿಸಲು ಕನಿಷ್ಟ 05 ವರ್ಷಗಳ ಅರ್ಹತಾ ಸೇವಾವಧಿಯನ್ನು ಪೂರೈಸಿರಬೇಕು.<br>3) ಡಿ ಗ್ರೂಪ್ ನೌಕರರು ಕನಿಷ್ಟ ಅರ್ಹತಾ ಅವಧಿ 07 ವರ್ಷಗಳ ಸೇವಾವಧಿಯನ್ನು ಪೂರ್ಣಗೊಳಿಸಿರಬೇಕು. |
| 2 | ವರ್ಗಾವಣೆ | 1) ಆಡಳಿತಾತ್ಮಕ / ಸಾರ್ವಜನಿಕ ಹಿತದೃಷ್ಟಿ<br>2) ನೌಕರರ ಕೋರಿಕೆಯ ಮೇರೆಗೆ ನೌಕರರು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಿಂದ ಬೇರೆ ಸ್ಥಳಕ್ಕೆ ವರ್ಗಾಯಿಸುವುದು. |
| 3 | ಸ್ಥಳಾಂತರ | ಒಬ್ಬ ನೌಕರನು ತಾನು ಕರ್ತವ್ಯ ನಿರ್ವಹಿಸುತ್ತಿರುವ ವಸತಿ ಶಾಲೆಯಲ್ಲಿ ಕನಿಷ್ಟ ಸೇವಾವಧಿಯನ್ನು ಪೂರ್ಣಗೊಳಿಸಿದ ನಂತರ ಆ ಸ್ಥಳಕ್ಕೆ ಬೇರೊಬ್ಬ |

| | | |
|---|---|---|
| | | ನೌಕರನು ಕೋರಿಕೆ ವರ್ಗಾವಣೆ ಬಯಸಿದ ಸಂದರ್ಭದಲ್ಲಿ ಕೈಗೊಳ್ಳುವ ಪ್ರಕ್ರಿಯೆ. ಇದು ಈ ಕೆಳಕಂಡ ನೌಕರರಿಗೆ ಅನ್ವಯಿಸುತ್ತದೆ.<br>➢ ಕನಿಷ್ಟ ಸೇವಾವಧಿ ಮುಗಿದ ನಂತರ ನೌಕರರುಗಳಿಗೆ ಸ್ಥಳ ನಿಯುಕ್ತಿ ಮಾಡಲಾಗುತ್ತದೆ. |

**ಅವಧಿ :**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ತನ್ನ ನೌಕರರಿಗೆ ಒಂದು ಸ್ಥಳದಲ್ಲಿನ ಕನಿಷ್ಟ ವರ್ಷದ ಸೇವೆಯನ್ನು ಈ ಕೆಳಕಂಡಂತೆ ನಿಗಧಿಪಡಿಸಿದೆ.

| ಕ್ರ. ಸಂ | ಹುದ್ದೆ | ಆಡಳಿತಾತ್ಮಕ ಹಿತದೃಷ್ಠಿ / ಸಾರ್ವಜನಿಕ ಹಿತದೃಷ್ಠಿ/ಸ್ಥಳಾಂತರ/ಕೋರಿಕೆಯ ವರ್ಗಾವಣೆಗಾಗಿ ನಿಗಧಿಪಡಿಸಿದ ಕಾಲವಧಿ (ವರ್ಷಗಳಲ್ಲಿ) |
|---|---|---|
| 1 | ವಸತಿ ಶಾಲೆಗಳು ಮತ್ತು ಕಾಲೇಜುಗಳ "ಎ" ಮತ್ತು "ಬಿ" ವರ್ಗದ ನೌಕರರಿಗೆ | 05 ವರ್ಷಗಳು |
| 2 | ವಸತಿ ಶಾಲೆಗಳು ಮತ್ತು ಕಾಲೇಜುಗಳ "ಸಿ" ವರ್ಗದ ನೌಕರರಿಗೆ | 05 ವರ್ಷಗಳು |
| 3 | "ಡಿ" ಗ್ರೂಪ್ ಸಿಬ್ಬಂದಿಗಳು | 07 ವರ್ಷಗಳು |

**01. ವರ್ಗಾವಣೆಯ ವಿಧಗಳು :**

ವರ್ಗಾವಣೆಯನ್ನು ಈ ಕೆಳಕಂಡಂತೆ ಎರಡು ರೀತಿಯಾಗಿ ವಿಂಗಡಿಸಿದೆ.

1) **ಕೋರಿಕೆಯ ವರ್ಗಾವಣೆ :** ನೌಕರರ ಕೋರಿಕೆಯ ಮೇರೆಗೆ ಒಟ್ಟು ಮಂಜೂರಾದ ಹುದ್ದೆಗಳಲ್ಲಿ ಸರ್ಕಾರವು ಸಾರ್ವಜನಿಕ ವರ್ಗಾವಣೆಯಲ್ಲಿ ನಿಗಧಿಪಡಿಸಿರುವ ಶೇಕಡವಾರು ವರ್ಗಾವಣೆ ಪ್ರಮಾಣದನ್ವಯ ನೌಕರರ ವರ್ಗಾವಣೆ ಕೈಗೊಳ್ಳಲಾಗುವುದು. ಇದು ಕಾಲಕಾಲಕ್ಕೆ ಸರ್ಕಾರದ ಆದೇಶದನ್ವಯ ಮಾರ್ಪಾಡಿಗೆ ಒಳಪಟ್ಟಿರುತ್ತದೆ.

2) **ಆಡಳಿತಾತ್ಮಕ ವರ್ಗಾವಣೆ** : - ಈ ರೀತಿಯ ವರ್ಗಾವಣೆ/ ಕೋರಿಕೆಯ ಮೇರೆಗೆ ವರ್ಗಾವಣೆ ಪಡೆದು, ಆ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಸಂಘವು ಸಾರ್ವಜನಿಕ /ಆಡಳಿತಾತ್ಮಕ ಹಿತದೃಷ್ಠಿಯಿಂದ/ದೂರಿನ ಹಿನ್ನೆಲೆಯಲ್ಲಿ ವರ್ಗಾವಣೆಯನ್ನು ಮಾಡಲಾಗುತ್ತದೆ.

**02. ವರ್ಗಾವಣೆಯನ್ನು ಆನ್‌ಲೈನ್ ಕೌನ್ಸೆಲಿಂಗ್ ಮೂಲಕ ಮಾಡುವುದು.**

1) ಸಂಘದ ಎಲ್ಲಾ ಸಿಬ್ಬಂದಿಗಳ ವರ್ಗಾವಣೆಯನ್ನು ಕೌನ್ಸಿಲಿಂಗ್ ಪ್ರಕ್ರಿಯೆಯ ಮೂಲಕ ನಡೆಸಲಾಗುತ್ತದೆ. ಸಂಬಂಧಪಟ್ಟ ನೌಕರರ ಕೋರಿಕೆಯನ್ನು ಆನ್‌ಲೈನ್ ಮೂಲಕ ಸ್ವೀಕರಿಸಿ ವರ್ಗಾವಣೆ ಮಾಡಬೇಕು.
2) ವರ್ಗಾವಣೆ ಕೋರುವ ಎಲ್ಲಾ ಸಿಬ್ಬಂದಿಗಳಿಗೆ ಶೈಕ್ಷಣಿಕ ವರ್ಷ ಮುಕ್ತಾಯದ ನಂತರ ಮತ್ತು ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮುಂಚೆ (ಏಪ್ರಿಲ್-ಮೇ) ಆನ್‌ಲೈನ್ ಮೂಲಕ ಕೌನ್ಸೆಲಿಂಗ್ ನಡೆಸುವುದು.
3) ಕೋರಿಕೆಯ ವರ್ಗಾವಣೆಯ ಸ್ಥಳ ನಿಯುಕ್ತಿಯನ್ನು ವರ್ಗಾವಣೆ ಅಂಕಗಳ ಇಳಿಕೆ ಕ್ರಮದಲ್ಲಿ ಲೆಕ್ಕಾಚಾರ ಮಾಡಿ ಸ್ಥಳ ನಿಯುಕ್ತಿಗೊಳಿಸಲಾಗುವುದು.

03. **ಕೋರಿಕೆಯ ವರ್ಗಾವಣೆ:**

ವರ್ಗಾವಣೆಗೆ ನಿಗಧಿಪಡಿಸಿದ ಅಂಕಗಳ ಆಧಾರದ ಮೇಲೆ ಕೋರಿಕೆಯ ವರ್ಗಾವಣೆ ಮಾಡುವ ವಿಧಾನ :

1) ಕೋರಿಕೆಯ ವರ್ಗಾವಣೆಯ ಸ್ಥಳ ನಿಯುಕ್ತಿಯನ್ನು ವರ್ಗಾವಣೆ ಅಂಕಗಳ ಇಳಿಕೆ ಕ್ರಮದಲ್ಲಿ ಲೆಕ್ಕಚಾರ ಮಾಡಿ ಸ್ಥಳ ನಿಯುಕ್ತಿಗೊಳಿಸಲಾಗುವುದು. (ಕೆಳಗಿನ ಕೋಷ್ಠಕದಲ್ಲಿರುವಂತೆ)

2) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಹೆಣ್ಣು ಮಕ್ಕಳ ವಸತಿ ಶಾಲೆಗಳಲ್ಲಿ ಪ್ರಾಂಶುಪಾಲರು, ನಿಲಯಪಾಲಕರು, ಶುಶ್ರೂಷಕರು ಮತ್ತು ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳಿಗೆ ಮಹಿಳಾ ಸಿಬ್ಬಂದಿಗಳಿಗೆ ಮೊದಲ ಆದ್ಯತೆಯಲ್ಲಿ ಇರುವಂತೆ ವರ್ಗಾವಣೆಗೆ ಪರಿಗಣಿಸುವುದು.

3) ವರ್ಗಾವಣೆ ಕೋರಿ ಒಂದೇ ಸ್ಥಳಕ್ಕೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ನೌಕರರು ಒಂದೇ ಹುದ್ದೆಗೆ ವರ್ಗಾವಣೆಯಾಗಲು ಬಯಸಿದ ಪ್ರಕರಣದಲ್ಲಿ ಸೇವಾ ಹಿರಿತನದ ಆಧಾರದ ಮೇಲೆ ವರ್ಗಾವಣೆಗೊಳಿಸುವುದು.

    1) ಒಂದು ವೇಳೆ ಒಂದೇ ಸ್ಥಳಕ್ಕೆ ಮಹಿಳಾ/ಪುರುಷ ಸಿಬ್ಬಂಧಿಗಳು ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ನೌಕರರು ಒಂದೇ ಹುದ್ದೆಗೆ ವರ್ಗಾವಣೆ ಬಯಸಿದ್ದಲ್ಲಿ, ಸೇವಾ ಹಿರಿತನದ ಆಧಾರದ ಮೇಲೆ ಸ್ಥಳ ನಿಯುಕ್ತಿಗೊಳಿಸುವುದು.

4) ಪತಿ-ಪತ್ನಿ ಪ್ರಕರಣದಲ್ಲಿ ವರ್ಗಾವಣೆಗೆ ಅರ್ಜಿ ಸಲ್ಲಿಸುವ ಸಿಬ್ಬಂದಿಗಳು ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ವರ್ಗಾವಣೆಗೆ ಕೋರಲು ಅರ್ಹರಾಗಿದ್ದು, ಒಂದೇ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಪತಿ-ಪತ್ನಿ ಪ್ರಕರಣದಡಿ ವರ್ಗಾವಣೆಗೆ ಅವಕಾಶವಿರುವುದಿಲ್ಲ.

5) ವಿವಿಧ ರೀತಿಯ ವರ್ಗಾವಣೆ ಪ್ರಕರಣಗಳಲ್ಲಿ ವರ್ಗಾವಣೆ ಕೋರಿ ಬರುವಂತಹ ಎಲ್ಲಾ ನೌಕರರುಗಳಿಗೆ ವರ್ಗಾವಣೆಯ ಮಾರ್ಗಸೂಚಿಯಂತೆ ಪರಿಶೀಲಿಸಿ, ಪ್ರಕರಣವಾರು ಅಂಕಗಳನ್ನು ನೀಡಿ, ನಿಗಧಿಪಡಿಸಿದ ಅಂಕಗಳನ್ನು ಪ್ರಕಟಿಸಿ ನಂತರ ವರ್ಗಾವಣೆ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್ ಮೂಲಕ ಮಾಡುವುದು.

6) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಪ್ರತಿ ವರ್ಷವು ವರ್ಗಾವಣೆ ಕೋರಿಕೆಗೆ ಅರ್ಜಿಗಳನ್ನು ಆಹ್ವಾನಿಸುವ ಮೊದಲೇ, ವರ್ಗಾವಣೆ ಪ್ರಕರಣಗಳ ಸಂಬಂಧ ನೀಡಲಾಗುವ ಅಂಕಗಳನ್ನು ಹೆಚ್ಚಿಸುವ /ಕಡಿಮೆಗೊಳಿಸುವ ಸಂಬಂಧ ಅಧಿಸೂಚನೆಯನ್ನು ಹೊರಡಿಸಲಾಗುವುದು.

7) 2022-23 ನೇ ಸಾಲಿನ ವರ್ಗಾವಣೆಯು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 16 ಸೇನೌವ 2022, ದಿನಾಂಕ:30.04.2022 ರನ್ವಯ ಕಾರ್ಯನಿರತ ವೃಂದ ಬಲದ ಶೇಕಡ 06 ರ ಮಿತಿಗೆ ಒಳಪಟ್ಟು ವರ್ಗಾವಣೆ ಕೈಗೊಳ್ಳತಕ್ಕದ್ದು.

**3.1** ಕಲ್ಯಾಣ ಕರ್ನಾಟಕ ಪ್ರದೇಶದ ವಸತಿ ಶಾಲೆ/ಕಾಲೇಜುಗಳಿಗೆ ಮತ್ತು ಅಲ್ಲಿನ ಶಾಲೆ/ಕಾಲೇಜುಗಳಿಂದ ವರ್ಗಾವಣೆಗೊಳಿಸುವ ಮಾನದಂಡಗಳು

1) ಸಂಘದ ಇತರೆ ಭಾಗದ ಬೋದಕ/ಬೋದಕೇತರ ಸಿಬ್ಬಂದಿಗಳ (Non KK) ಕಲ್ಯಾಣ ಕರ್ನಾಟಕ ಭಾಗದಲ್ಲಿ ನಿಗಧಿತ ಕನಿಷ್ಠ ಕಡ್ಡಾಯ ಅವಧಿಗೆ ಸಂಬಂದಿಸಿದಂತೆ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 17 ಸೇನೌವ 2015, ದಿನಾಂಕ : 25.04.2015 ರಂತೆ ಕ್ರಮವಹಿಸುವುದು.

2) ಕಲ್ಯಾಣ-ಕರ್ನಾಟಕ (KK) ಪ್ರದೇಶದಲ್ಲಿ ಭೋದಕ/ಭೋಧಕೇತರ ಸಿಬ್ಬಂದಿಯನ್ನು ವರ್ಗಾಯಿಸಲು

**ಆದ್ಯತಾ ಅಂಶಗಳು:**

(a) ಕಲ್ಯಾಣ-ಕರ್ನಾಟಕ (KK) ಪ್ರದೇಶದಲ್ಲಿ ಸ್ವ-ಇಚ್ಛೆಯಿಂದ ಸೇವೆ ಸಲ್ಲಿಸಲು ಇಚ್ಛಿಸುವ ನೌಕರರಿಗೆ ಅವಕಾಶ ಮಾಡಿಕೊಡುವುದು.

(b) ಕಲ್ಯಾಣ-ಕರ್ನಾಟಕ ಮೀಸಲಾತಿಯ ಅಡಿಯಲ್ಲಿ ನೇಮಕಗೊಂಡು ಇತರೆ ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವ ಕಲ್ಯಾಣ-ಕರ್ನಾಟಕ (KK) ನೌಕರರನ್ನು ಕಡ್ಡಾಯವಾಗಿ ಕಲ್ಯಾಣ-ಕರ್ನಾಟಕ ಪ್ರದೇಶಕ್ಕೆ ಸ್ಥಳಾಂತರಿಸುವುದು.

2) ಸಂಘದ ಅಧಿಕೃತ ವೆಬ್‌ಸೈಟ್ ನಲ್ಲಿ ಖಾಲಿ ಸ್ಥಳಗಳ ಮಾಹಿತಿಯನ್ನು ಪ್ರದರ್ಶಿಸಿದ ನಂತರ ನೌಕರರ ಸ್ವ-ಇಚ್ಛೆಯಂತೆ ಕಲ್ಯಾಣ-ಕರ್ನಾಟಕ (KK) ಪ್ರದೇಶದಲ್ಲಿ ಸೇವೆ ಸಲ್ಲಿಸಲು ಬಯಸುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವುದು.

4) ಕಲ್ಯಾಣ-ಕರ್ನಾಟಕ (KK) ಪ್ರದೇಶದಲ್ಲಿ ಸೇವೆ ಸಲ್ಲಿಸಿ, ನಿಗಧಿತ ಕಡ್ಡಾಯ ಅವಧಿ ಮುಕ್ತಾಯಗೊಂಡ ನೌಕರರು ನಿಗಧಿತ ನಮೂನೆಯಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು. ಈ ಅರ್ಜಿಯಲ್ಲಿ ಅಭ್ಯರ್ಥಿಯ ಅರ್ಹತೆ ಹಾಗೂ ಇತರೆ ವಿವರಗಳನ್ನು ಭರ್ತಿಮಾಡಬೇಕು. ನಂತರ ಅರ್ಜಿಗಳನ್ನು ಪರಿಶೀಲಿಸಿ, ವಿಷಯಾವಾರು ಕೌಶಲ್ಯ ಪ್ರದರ್ಶನ ಹಾಗೂ ಇತರೆ ಅಂಶಗಳ ಆಧಾರದ ಮೇಲೆ ಇಳಿಕೆ ಕ್ರಮಾಂಕದಲ್ಲಿ ವರ್ಗಾವಣೆ ಮಾಡಲಾಗುವುದು.

**3.2 ನೌಕರರ ಕೋರಿಕೆಯ ವರ್ಗಾವಣೆಗಾಗಿ ನಿಗಧಿಪಡಿಸಿದ ಅಂಶಗಳನ್ನು ಪರಿಗಣಿಸಿ ಅಂಕಗಳ ನೀಡಿಕೆಯ ಲೆಕ್ಕಾಚಾರ :**

| ಕ್ರ.ಸಂ | ವರ್ಗಾವಣೆಗೆ ಪರಿಗಣಿಸಬೇಕಾದ ಅಂಶಗಳು | ಸಲ್ಲಿಸಬೇಕಾದ ದಾಖಲೆಗಳು | ಅಂಕಗಳು |
|---|---|---|---|
| 1 | ಕೋರಿಕೆಯ ವರ್ಗಾವಣೆಗೆ ಸಂಬಂಧಿಸಿದಂತೆ ಮೊದಲ ಪೂರ್ಣಗೊಂಡ ವರ್ಷಕ್ಕೆ 01 ಅಂಕ, ಎರಡನೇ ಪೂರ್ಣಗೊಂಡ ವರ್ಷಕ್ಕೆ -02 ಅಂಕ, ಮೂರನೇ ಪೂರ್ಣಗೊಂಡ ವರ್ಷಕ್ಕೆ-03 ಅಂಕಗಳಂತೆ ಪರಿಗಣಿಸಿ ಪ್ರತಿ ವರ್ಷಕ್ಕೆ ಏರಿಕೆ ಕ್ರಮದಲ್ಲಿ 01 ಅಂಕಗಳನ್ನು ಹೆಚ್ಚಿಸುತ್ತಾ, ಎಲ್ಲಾ ವರ್ಷಗಳ ಒಟ್ಟು ವರ್ಷ ಅಂಕಗಳನ್ನು ಪರಿಗಣಿಸಲಾಗುವುದು. ಒಂದು ವೇಳೆ ನೌಕರರು 30 ಅಥವಾ ಅದಕ್ಕಿಂತ ಹೆಚ್ಚಿನ ದಿನಗಳ ಅನಧಿಕೃತ ಗೈರು ಹಾಜರಾಗಿದ್ದಲ್ಲಿ ಅಥವಾ ಒಂದು ಬಾರಿಗೆ 60 ಕ್ಕಿಂತ ಹೆಚ್ಚು ದಿನಗಳು ಯಾವುದೇ ರಜೆ/ಗೈರಾಗಿದ್ದಲ್ಲಿ ಅಥವಾ ಒಂದು ಶೈಕ್ಷಣಿಕ ಸಾಲಿನಲ್ಲಿ 120 ದಿನಗಳು (ಏಪ್ರಿಲ್ ನಿಂದ ಮಾರ್ಚ್) (ಹೆರಿಗೆ ರಜೆ ಹೊರತುಪಡಿಸಿ) ರಜೆಯ ಮೇಲೆ ತೆರಳಿದ್ದಲ್ಲಿ. ಈ ಅಂಕಗಳನ್ನು ನೀಡಲಾಗುವುದಿಲ್ಲ. | ಸೇವಾ ದೃಢೀಕರಣ ಪ್ರಮಾಣ ಪತ್ರ ಪ್ರಾಂಶುಪಾಲರು- ಆಯಾ ಜಿಲ್ಲಾ ಮಟ್ಟದ ಅಧಿಕಾರಿಗಳು ಸಿಬ್ಬಂದಿಗಳು - ಆಯಾ ವಸತಿ ಶಾಲೆಗಳ ಪ್ರಾಂಶುಪಾಲರು | ಪೂರ್ಣಗೊಂಡ ಮೊದಲ ವರ್ಷಕ್ಕೆ-01, ಎರಡನೇ ವರ್ಷಕ್ಕೆ-02, ಮೂರನೇ ವರ್ಷಕ್ಕೆ-03 |
| 2 | ಒಂದು ವೇಳೆ ಪತಿ/ಪತ್ನಿಯು ಕ.ವ.ಶಿ.ಸ.ಸಂಘದ | ಸಂಬಂಧಿಸಿದ | +10 |

| | | | |
|---|---|---|---|
| | ಅಡಿಯಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದರೆ ಪತಿ-ಪತ್ನಿ ಪ್ರಕರಣದ ವರ್ಗಾವಣೆಯಲ್ಲಿ 10 ಅಂಕಗಳನ್ನು ನಿಗಧಿಪಡಿಸಲಾಗಿದೆ ಅಥವಾ ಪತಿ-ಪತ್ನಿ ಪ್ರಕರಣದಲ್ಲಿ ಕವಶಿಸ ಸಂಘದ ಅಧೀನದ ವಸತಿ ಶಾಲೆ/ಕಾಲೇಜುಗಳನ್ನು ಹೊರತುಪಡಿಸಿ ಕೇಂದ್ರ/ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮತ್ತು ಸರ್ಕಾರದ ಸ್ವಾಯುತ್ತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ 10 ಅಂಕಗಳನ್ನು ನಿಗಧಿಪಡಿಸಲಾಗಿದೆ. | ಪ್ರಾಧಿಕಾರದಿಂದ ಸೇವಾ ದೃಢೀಕರಣ ಪ್ರಮಾಣ ಪತ್ರ | |
| 3 | ಸಂಗಾತಿಯು ಮರಣ ಹೊಂದಿದ ವರ್ಷದಲ್ಲಿ ಅಥವಾ ನಿವೃತ್ತಿಯ ಸಮೀಪದ (07 ವರ್ಷಗಳ) ಕಾರಣಗಳಿಗೆ ಪ್ರತಿ ಪ್ರಕರಣಗಳಿಗೆ 10 ಅಂಕಗಳನ್ನು ನಿಗಧಿಪಡಿಸಲಾಗಿದೆ. | ಸಂಬಂಧಿಸಿದ ಪ್ರಮಾಣ ಪತ್ರ | +10 |
| 4 | Non KK ಸಿಬ್ಬಂದಿಯು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ವರ್ಗಾವಣೆಗೆ ನಿಗಧಿಪಡಿಸಿದ ಅವಧಿಯನ್ನು ಪೂರ್ಣಗೊಳಿಸಿ ವರ್ಗಾವಣೆಗೆ ಕೋರಿಕೆಯನ್ನು ಸಲ್ಲಿಸಿದ ಸಂದರ್ಭದಲ್ಲಿ 20 ಅಂಕಗಳನ್ನು ನಿಗಧಿಪಡಿಸಲಾಗಿದೆ. | ಸೇವಾ ದೃಢೀಕರಣ | +20 |
| 5 | ವಿಕಲಚೇತನ ನೌಕರರ ವರ್ಗಾವಣೆಯ ಸಂಬಂಧ ನೌಕರರಿಗೆ 30 ಅಂಕಗಳನ್ನು ನಿಗಧಿಪಡಿಸಲಾಗಿದೆ. (ಸಿಬ್ಬಂದಿ ಅಥವಾ ಸಂಗಾತಿ ಅಥವಾ ಅವಲಂಬಿತ ಮಗ/ಮಗಳು 40% ಕ್ಕಿಂತಲೂ ಹೆಚ್ಚಿನ ವಿಶೇಷ ಚೇತನರಾಗಿದ್ದು, ಸರ್ಕಾರಿ ವೈದ್ಯಕೀಯ ಮಂಡಳಿಯಿಂದ ಅರ್ಹ ಪ್ರಮಾಣ ಪತ್ರ ಪಡೆದು ಕೊನೆಯ ದಿನಾಂಕದೊಳಗೆ ನವೀಕೃತ ಮೌಲ್ಯಮಾಪನಗೊಳಿಸಿರುವ ಪ್ರಮಾಣ ಪತ್ರ ಸಲ್ಲಿಸಿದಲ್ಲಿ) | ಅಂಗವಿಕಲ ಪ್ರಮಾಣ ಪತ್ರ | +30 |
| 6 | **ಮಹಿಳಾ ಉದ್ಯೋಗಿ:** ಮಹಿಳಾ ಉದ್ಯೋಗಿಗಳಿಗೆ 5 ಅಂಕಗಳನ್ನು ವರ್ಗಾವಣೆಗೆ ನಿಗಧಿಪಡಿಸಲಾಗಿರುತ್ತದೆ. ಆದರೆ ಕ್ರ .ಸಂ 2,3,4 ಮತ್ತು 5 ರ ಅಡಿಯಲ್ಲಿ ಅರ್ಹತೆ ಹೊಂದಿರುವ ಮಹಿಳಾ ನೌಕರರು ಈ ಅಂಕಗಳನ್ನು ಪಡೆಯಲು ಅರ್ಹರಾಗಿರುವದಿಲ್ಲ. | | +05 |
| 7 | ವಿಧವೆ/ಅವಿವಾಹಿತ/ ವಿಚ್ಛೇದಿತ ಮಹಿಳಾ ನೌಕರರು ವರ್ಗಾವಣೆ ಪ್ರಕ್ರಿಯೆಯ ಕೊನೆಯ ದಿನಾಂಕದವರೆಗೂ ಅವಿವಾಹಿತೆಯಾಗಿರುವ ಕುರಿತು ದೃಢೀಕರಣ ಪತ್ರ. | ಮರಣ ಪ್ರಮಾಣ ಪತ್ರ | +05 |
| 8 | 1. ನೌಕರರ ಪೋಷಕರು (ತಂದೆ-ತಾಯಿ) ಗಂಭೀರ | ವೈದ್ಯಕೀಯ ಪ್ರಮಾಣ ಪತ್ರ | |

| | | | |
|---|---|---|---|
| | ಅನಾರೋಗ್ಯಕ್ಕೆ (Angioplasty, Coronary artery bypass grafting, Valve replacement or reconstruction, Open heart surgery, Cancer, Kidney failure, Paralysis, Thalassemia disease, Parkinson's disease, Motor neuron disease) ತುತ್ತಾಗಿದ್ದರೆ ಪ್ರತಿ ಪೋಷಕರಿಗೆ 05 ಅಂಕಗಳನ್ನು ನಿಗಧಿಪಡಿಸಲಾಗಿದೆ.<br>2. ನೌಕರರ ಸಂಗಾತಿ/ಮಕ್ಕಳು ಗಂಭೀರ ಅನಾರೋಗ್ಯಕ್ಕೆ ತುತ್ತಾಗಿದ್ದರೆ 10 ಅಂಕಗಳನ್ನು ನಿಗಧಿಪಡಿಸಲಾಗಿದೆ.<br>**ವಿಶೇಷ ಸೂಚನೆ:-** ರಕ್ತದೊತ್ತಡ, ಮದುಮೇಹ, ಕಣ್ಣಿನಪೊರೆ ಶಸ್ತ್ರ ಚಿಕಿತ್ಸೆ ಮೊದಲಾದವುಗಳನ್ನು ಗಂಭೀರ ಅನಾರೋಗ್ಯವೆಂದು ಪರಿಗಣಿಸಲಾಗುವುದಿಲ್ಲ | | +05<br>+10 |
| | ವರ್ಗಾವಣೆಯ ಎಣಿಕೆ | | ಒಟ್ಟು ಗಳಿಸಿದ ಅಂಕಗಳು |

**04. ಆಡಳಿತಾತ್ಮಕ ಹಿತದೃಷ್ಟಿಯಿಂದ ವರ್ಗಾವಣೆ:**

ಅ) ಸಾರ್ವಜನಿಕ ಹಿತದೃಷ್ಟಿಯಿಂದ ಆಡಳಿತಾತ್ಮಕ ವರ್ಗಾವಣೆಯ ಪ್ರಥಮ ಆದ್ಯತೆಯು "ಎ" ಮತ್ತು "ಬಿ" ವರ್ಗದ ನೌಕರರಿಗೆ ಬೇರೆ ಕಂದಾಯ ವಿಭಾಗಕ್ಕೆ ಸ್ಥಳಾಂತರಿಸಲಾಗುವುದು. "ಸಿ" ವರ್ಗದ ನೌಕರರಿಗೆ ಅದೇ ಜಿಲ್ಲೆಯಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳಿಗೆ ಸ್ಥಳಾವಕಾಶ (Posting) ನೀಡುವುದು. ಒಂದು ವೇಳೆ ಅದೇ ಜಿಲ್ಲೆಯಲ್ಲಿ ಖಾಲಿ ಹುದ್ದೆಗಳು ಲಭ್ಯವಿಲ್ಲದಿದ್ದಲ್ಲಿ, ಖಾಲಿ ಇರುವ ಬೇರೊಂದು ಜಿಲ್ಲೆಗೆ ವರ್ಗಾವಣೆ ಮಾಡುವುದು.

ಆ) ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧಿಕೃತ ವೆಬ್‌ಸೈಟ್‌ನಲ್ಲಿ ವರ್ಗಾವಣೆಗಾಗಿ ಅರ್ಜಿಗಳನ್ನು ಆಹ್ವಾನಿಸುವುದು, ನೌಕರರ ವರ್ಗಾವಣೆ/ಸ್ಥಳಾಂತರ ಅಂಕಗಳ ಇಳಿಕೆ ಕ್ರಮದ ಆಧಾರದಲ್ಲಿ ಅಭ್ಯರ್ಥಿಗಳಿಗೆ ವರ್ಗಾವಣೆ ಆದೇಶವನ್ನು ನೀಡುವುದು.

1. . ಉದ್ಯೋಗಿಗಳ ಸ್ಥಳಾಂತರ ಅಂಕಗಳಲ್ಲಿ ಮಹಿಳಾ ಮತ್ತು ಪುರುಷ ನೌಕರರ ಮದ್ಯೆ ಸ್ಪರ್ಧೆ(Tie) ಇದ್ದಲ್ಲಿ ಸೇವಾ ಜೇಷ್ಠತೆಯ ಆಧಾರದ ಮೇಲೆ ಸ್ಥಳಾಂತರ ಮಾಡಲಾಗುವುದು.
2. ಸೇವೆಗೆ ಸೇರಿದ ದಿನಾಂಕವೂ ಕೂಡ ಒಂದೇ ಆಗಿದ್ದಲ್ಲಿ ವಿಲೀನಗೊಂಡ ನೌಕರರಾಗಿದ್ದಲ್ಲಿ ಯಾವ ನೌಕರರು ವಯಸ್ಸಿನಲ್ಲಿ ಹಿರಿಯರಾಗಿತ್ತಾರೊ ಅಂತಹ ನೌಕರರನ್ನು ಮತ್ತು ನೇರ ನೇಮಕಾತಿಗೊಂಡ ಶಿಕ್ಷಕರಿಗೆ ಸೇವಾ ಜೇಷ್ಠತಾ ಪಟ್ಟಿಯಂತೆ ನೌಕರರನ್ನು ಮೊದಲು ಸ್ಥಳಾಂತರಿಸಬೇಕು.

ಇ) ದೂರುಗಳ ಆಧಾರದ ಮೇಲೆ ವರ್ಗಾವಣೆಗಳು- ದೂರಿನ ಆಧಾರದ ಮೇಲಿನ ವರ್ಗಾವಣೆಗಳ ಪ್ರಕರಣದಲ್ಲಿ ಸರ್ಕಾರದ ಆದೇಶ ಸಂಖ್ಯೆ ಡಿ.ಪಿ.ಎ.ಆರ್ 04 ಎಸ್.ಟಿ.ಆರ್ 2001, ದಿನಾಂಕ 22.11.2021 ರ 7 (ಎಫ್) ರ ಸೂಚನೆಗಳನ್ನು ಅನುಸರಿಸತಕ್ಕದ್ದು.

## 4.1 ಸ್ಥಳಾಂತರ ವರ್ಗಾವಣೆಯನ್ನು ನಿರ್ಧರಿಸುವ ಅಂಶಗಳು :

| ಕ್ರ.ಸಂ | ಸ್ಥಳಾಂತರ ವರ್ಗಾವಣೆಗೆ ಪರಿಗಣಿಸಬೇಕಾದ ಅಂಶಗಳು | ಅಂಕಗಳು |
|---|---|---|
| 1 | ಸ್ಥಳಾಂತರ ವರ್ಗಾವಣೆಗೆ ಸಂಬಂಧಿಸಿದಂತೆ ಮೊದಲ ಪೂರ್ಣಗೊಂಡ ವರ್ಷಕ್ಕೆ 01 ಅಂಕ, ಎರಡನೇ ಪೂರ್ಣಗೊಂಡ ವರ್ಷಕ್ಕೆ -02 ಅಂಕ, ಮೂರನೇ ಪೂರ್ಣಗೊಂಡ ವರ್ಷಕ್ಕೆ-03 ಅಂಕಗಳಂತೆ ಪರಿಗಣಿಸಿ ಪ್ರತಿ ವರ್ಷಕ್ಕೆ ಏರಿಕೆ ಕ್ರಮದಲ್ಲಿ ಅಂಕಗಳನ್ನು ಹೆಚ್ಚಿಸುತ್ತಾ, ಎಲ್ಲಾ ವರ್ಷಗಳ ಒಟ್ಟು ವರ್ಷ ಅಂಕಗಳನ್ನು ಪರಿಗಣಿಸಲಾಗುವುದು. | ಪೂರ್ಣಗೊಂಡ ಮೊದಲ ವರ್ಷಕ್ಕೆ-01, ಎರಡನೇ ವರ್ಷಕ್ಕೆ-02, ಮೂರನೇ ವರ್ಷಕ್ಕೆ-03 |
| 2 | ಒಂದು ವೇಳೆ ಪತಿ/ಪತ್ನಿ ಕವಶಿಸ ಸಂಘದ ವಸತಿ ಶಾಲೆ/ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರ ಪತಿ/ಪತ್ನಿ ಮರಣ ಹೊಂದಿದ್ದಲ್ಲಿ (ಸಂಗಾತಿ ಮರಣ 05 ಅಂಕ) | -05 |
| 3 | ಪತಿ/ಪತ್ನಿ ಕೇಂದ್ರ ಸರ್ಕಾರದ/ ರಾಜ್ಯ ಸರ್ಕಾರದ /ಸರ್ಕಾರದ ಸ್ವಾಯತ್ತ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದಲ್ಲಿ (ಕ.ವ.ಶಿ.ಸ.ಸಂಘವನ್ನು ಹೊರತುಪಡಿಸಿ) | -10 |
| 4 | ಅಂಗವಿಕಲ ನೌಕರರು | -30 |
| 5 | ಪತಿ - ಪತ್ನಿ ಪ್ರಕರಣಗಳಲ್ಲಿ ಸಂಘದ ನೌಕರರಾಗಿದ್ದಾಗ.<br>ಅ) ಅದೇ ಜಿಲ್ಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರೆ.<br>ಆ) ಅದೇ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರೆ. | <br>-10<br>-20 |
| 6 | ನೌಕರರು ವಿಧವೆ/ವಿಧುರರಾಗಿದ್ದಲ್ಲಿ/ ಅವಿವಾಹಿತ ಮಹಿಳೆ/ ವಿಚ್ಛೇದಿತ ಮಹಿಳೆ | -5 |
| 7 | ನೌಕರರ ಮೇಲಿನ ವಿಚಾರಣೆ/ದೂರುಗಳ ಆಧಾರದ ಮೇಲೆ ಸ್ಥಳಾಂತರಗೊಳಿಸುವಾಗ | +10 |
| ಒಟ್ಟು | ಸ್ಥಳಾಂತರ ಲೆಕ್ಕ | ಎಲ್ಲಾ ಅಂಶಗಳ ಒಟ್ಟು ಅಂಕಗಳು |

## 4.2 ಸ್ಥಳಾಂತರದ ಎಣಿಕೆ ಅಂಕಗಳ ಆಧಾರದ ಮೇಲೆ ಸ್ಥಳಾಂತರ ವರ್ಗಾವಣೆ ಪ್ರಕ್ರಿಯೆಯ ವಿಧಾನ :

1) ಒಬ್ಬ ನೌಕರನನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸ್ಥಾನ ಪಲ್ಲಟವನ್ನು ಇಳಿಕೆ ಕ್ರಮದ ಲೆಕ್ಕಾಚಾರ ಮಾಡಿ ಸ್ಥಳ ನಿಯುಕ್ತಿಗೊಳಿಸಲಾಗುವುದು. (ಮೇಲಿನ ಕೋಷ್ಠಕದಲ್ಲಿರುವಂತೆ)

2) ಒಂದೇ ಸ್ಥಳಕ್ಕೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ನೌಕರರು ಒಂದೇ ಹುದ್ದೆಗೆ ಸ್ಥಳಾಂತರವಾದ ಪ್ರಕರಣಗಳಲ್ಲಿ ಸೇವಾ ಹಿರಿತನವನ್ನು ಪರಿಗಣಿಸುವುದು.

3) ಒಂದೇ ಲಿಂಗಕ್ಕೆ ಸೇರಿದ 2 ಅಥವಾ ಹೆಚ್ಚು ಅಭ್ಯರ್ಥಿಗಳ ಮಧ್ಯೆ ಸ್ಪರ್ಧೆ ಇದ್ದಲ್ಲಿ, ಪ್ರಸ್ತುತ ಹುದ್ದೆಯಲ್ಲಿ ಮೊದಲು ಸೇವೆಗೆ ಸೇರಿದ ಅಭ್ಯರ್ಥಿಯನ್ನು ವರ್ಗಾಯಿಸಬೇಕು. ಸೇವೆಗೆ ಸೇರಿದ ದಿನಾಂಕವೂ ಕೂಡ ಒಂದೇ ಆಗಿದ್ದಲ್ಲಿ, ಯಾವ ಅಭ್ಯರ್ಥಿಗೆ ಹೆಚ್ಚು ವಯಸ್ಸಾಗಿರುತ್ತದೆಯೋ ಅಂತಹ ಅಭ್ಯರ್ಥಿಯನ್ನು ಮೊದಲು ಸ್ಥಳಾಂತರಿಸಬೇಕು.

4) ಸ್ಥಳಾಂತರಗೊಳ್ಳಬಹುದಾದ ನೌಕರರಿಗೆ ಮಾರ್ಗಸೂಚಿಯನ್ವಯ ಪರಿಶೀಲಿಸಿ ಪ್ರಕರಣವಾರು ಅಂಕಗಳನ್ನು ನೀಡಿ, ನಿಗಧಿಪಡಿಸಿದ ಅಂಕಗಳನ್ನು ಪ್ರಕಟಿಸಿದ ನಂತರ ಆನ್‌ಲೈನ್ ಕೌನ್ಸಿಲಿಂಗ್ ಮೂಲಕ ಸ್ಥಳಾಂತರಗೊಳಿಸುವುದು.

5) ಪ್ರತಿ ವರ್ಷವು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಸ್ಥಳಾಂತರ ಹಾಗೂ ಕೋರಿಕೆಯ ವರ್ಗಾವಣೆಯ ಅರ್ಜಿಗಳನ್ನು ಆಹ್ವಾನಿಸಿ ಒಂದೇ ಕಾಲದಲ್ಲಿ ಎರಡು ವಿಭಾಗದ ಅರ್ಜಿಗಳನ್ನು ಪರಿಶೀಲಿಸಿ ಆನ್‌ಲೈನ್ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲಾಗುವುದು. ಸ್ಥಳಾಂತರ ಸಂಬಂಧ ನೀಡಲಾಗುವ ಅಂಕಗಳನ್ನು ಹೆಚ್ಚಿಸುವ / ಕಡಿಮೆಗೊಳಿಸುವ ಸಂಬಂಧ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ಕಾಲಕಾಲಕ್ಕೆ ಅಧಿಸೂಚನೆಯನ್ನು ಹೊರಡಿಸುವುದು.

6) ಈ ಕೆಳಕಂಡ ನೌಕರರನ್ನು ಸ್ಥಳಾಂತರಿಸುವಿಕೆಯಿಂದ ವಿನಾಯಿತಿ ನೀಡಬಹುದು.

ಅ) ಜನವರಿ 1 ರಂತೆ 55 ವರ್ಷಕ್ಕಿಂತ ಮೇಲ್ಪಟ್ಟ ಉದ್ಯೋಗಿಗಳು.

ಆ) ಅಂಗವಿಕಲತೆ ಹೊಂದಿರುವವರಿಗೆ

ಇ) ವಿಧುರ/ವಿಧವೆ ನೌಕರರು

ಈ) ವೈದ್ಯಕೀಯ ಸಮಸ್ಯೆಗಳಿರುವ ನೌಕರರು : ಮಾರಣಾಂತಿಕ/ಗಂಭೀರ ಕಾಯಿಲೆಗಳಾದ **Angioplasty, Coronary artery bypass grafting, Valve replacement or reconstruction, Open heart surgery, Cancer, Kidney failure, Paralysis, Thalassemia disease, Parkinson's disease, Motor neurone disease** ಸಮಸ್ಯೆಗಳನ್ನು ಹೊಂದಿರುವವರು.

ಉ) ನೌಕರರ ಸಂಘಗಳ ರಾಜ್ಯ ಮಟ್ಟದ 05 ಪಧಾಧಿಕಾರಿಗಳು

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಎಲ್ಲಾ ವೃಂದದ ನೌಕರರನ್ನು ಒಳಗೊಂಡಿರುವಂತಹ ನೌಕರರ ಸಂಘಗಳಾದ:

1) ಕರ್ನಾಟಕ ರಾಜ್ಯ ಕ್ರೈಸ್ ಪ್ರಾಂಶುಪಾಲರ ಸಂಘ, ಬೆಂಗಳೂರು.

2) ಕರ್ನಾಟಕ ರಾಜ್ಯದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ವಸತಿ ಶಾಲೆಗಳ ನೌಕರರ ಸಂಘ(ರಿ) ಬೆಂಗಳೂರು.

**05. ವರ್ಗಾವಣೆಯ ಪ್ರಾಧಿಕಾರಿಗಳು:**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಗ್ರೂಪ್- ಎ, ಬಿ, ಸಿ ಮತ್ತು ಡಿ ವರ್ಗದ ನೌಕರರ ವರ್ಗಾವಣೆ/ಸ್ಥಳಾಂತರ ಮಾಡಲು ಕಾರ್ಯನಿರ್ವಾಹಕ ನಿರ್ದೇಶಕರು ಸಕ್ಷಮ ಪ್ರಾಧಿಕಾರಿಯಾಗಿರುತ್ತಾರೆ.

ಕಾರ್ಯನಿರ್ವಾಹಕ ನಿರ್ದೇಶಕರು, ಕ.ವ.ಶಿ.ಸ.ಸಂಘ ಇವರು ವಸತಿ ಶಾಲೆ/ಕಾಲೇಜಿನ ಸಿಬ್ಬಂದಿಗಳ ಕೇಂದ್ರ ಸ್ಥಳವನ್ನು ತಾತ್ಕಾಲಿಕವಾಗಿ ಬದಲಾಯಿಸುವಾಗ ಕಾಳಜಿ ವಹಿಸಬೇಕಾಗುತ್ತದೆ. ಆದ್ದರಿಂದ ಸಿಬ್ಬಂದಿಯ ಸ್ಥಳ ಬದಲಾವಣೆಯು ವಿದ್ಯಾರ್ಥಿಗಳ ಶೈಕ್ಷಣಿಕ ಆಸಕ್ತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರದಂತಿರಬೇಕು.

**06. ವರ್ಗಾವಣೆ ಭತ್ಯೆಯ ಅಂಗೀಕಾರಾರ್ಹತೆ:**

ವರ್ಗಾವಣೆ ಭತ್ಯೆಯು ನಿಯಮಾನುಸಾರವಾಗಿ ಈ ಕೆಳಗಿನ ಪ್ರಕರಣಗಳಿಗೆ ಅನ್ವಯಿಸುತ್ತದೆ.

ಅ. ವರ್ಗಾವಣೆಯು ಆಡಳಿತಾತ್ಮಕ ಕಾರಣದಿಂದ ಆಗಿದ್ದಾಗ. ಇದು ಸಾರ್ವಜನಿಕ ಹಿತಾಸಕ್ತಿಗೆ ಒಳಗೊಂಡಂತೆ ಸಿಬ್ಬಂದಿಯ ಮರು ನಿಯೋಜನೆ.

ಅ. ಕೋರಿಕೆ ವರ್ಗಾವಣೆಗಳನ್ನು ಈ ಕೆಳಗಿನ ಸಂದರ್ಭಗಳಲ್ಲಿ ಮಾತ್ರ ಮಾಡುವುದು. ವರ್ಗಾವಣೆ ಬಯಸಿದ ಸ್ಥಳವು ಸಾಮಾನ್ಯ ಸ್ಥಳದಿಂದ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಿಗೆ ಮತ್ತು ಕಲ್ಯಾಣ ಕರ್ನಾಟಕ ಜಿಲ್ಲೆಗಳಿಂದ ಸಾಮಾನ್ಯ ಜಿಲ್ಲೆಗಳಿಗೆ ವರ್ಗಾವಣೆಯಾದಾಗ.

ಇ. ನಿಗಧಿತ ಕನಿಷ್ಠ ಅವಧಿ ಮುಗಿದಿರುವ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ಸ್ಥಳಗಳಿಂದ ಹೊರಗೆ ವರ್ಗಾವಣೆಯಾದಾಗ,

ಈ. ಆದಾಗ್ಯೂ, ವರ್ಗಾವಣೆ ಪ್ರಕ್ರಿಯೆಯ ಕೊನೆಯ ಹಂತದಲ್ಲಿ ಆಡಳಿತಾತ್ಮಕವಾಗಿ ಸ್ಥಳ ಬದಲಾವಣೆ ಮಾಡಿದಾಗ ವರ್ಗಾವಣೆ ಭತ್ಯೆಯು ಸ್ವೀಕಾರಾರ್ಹವಾಗುವುದಿಲ್ಲ.

**07. ಮಾರ್ಗಸೂಚಿ ನಿಯಮಗಳನ್ನು ಸಡಿಲಿಕೆ ಮಾಡುವ ಅಧಿಕಾರ:**

ಮಾರ್ಗಸೂಚಿ ನಿಯಮಗಳು ಏನೇ ಇದ್ದರೂ ಕಾರ್ಯನಿರ್ವಾಹಕ ನಿರ್ದೇಶಕರು, ಸಕ್ಷಮ ಪ್ರಾಧಿಕಾರಿಯಾಗಿದ್ದು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧ್ಯಕ್ಷರ ಪೂರ್ವಾನುಮತಿಯೊಂದಿಗೆ ವರ್ಗಾವಣೆಯನ್ನು ಸಮರ್ಥಿಸುವ ಸೂಕ್ತ ಕಾರಣಗಳೊಂದಿಗೆ ಯಾವುದೇ ಸಿಬ್ಬಂದಿಯನ್ನು, ಯಾವುದೇ ಸ್ಥಳಕ್ಕೆ, ಯಾವುದೇ ನಿಯಮ/ನಿಯಮಗಳನ್ನು ಸಡಿಲಿಸಿ ವರ್ಗಾವಣೆ ಮಾಡುವ ಅಧಿಕಾರ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಪ್ರದತ್ತವಾಗಿರುತ್ತದೆ.

**08. ಮಾರ್ಗಸೂಚಿಗಳ ವ್ಯಾಖ್ಯಾನ/ವಿವರಣೆ:**

ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರು ಸಕ್ಷಮ ಪ್ರಾಧಿಕಾರಿಯಾಗಿದ್ದು, ಇವರು ಮೇಲೆ ತಿಳಿಸಿರುವ ಅವಕಾಶಗಳನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆಗಳ ಸಮಗ್ರ ಆಡಳಿತ ಹಿತದೃಷ್ಟಿಯಿಂದ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ನಿಬಂಧನೆ ವಿಧಿಸುವ, ಕಾಲಕಾಲಕ್ಕೆ ಬದಲಾವಣೆ ಮಾಡುವ, ನಿಯಂತ್ರಿಸುವ ಹಾಗೂ ಆದೇಶಗಳನ್ನು ಹೊರಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.

**09. ಬಾಹ್ಯ ಪ್ರಭಾವದ ವಿರುದ್ಧ ರಕ್ಷಣೆ:**

ಸಿಬ್ಬಂದಿಗಳು ಯಾವುದೇ ಕಾರಣಕ್ಕೂ ಹೊರಗಿನ ಯಾವುದೇ ಮಾರ್ಗಗಳಿಂದ ಪ್ರಭಾವವನ್ನು ಬೀರತಕ್ಕದ್ದಲ್ಲ. ಅಂತಹ ಯಾವುದೇ ಪ್ರಭಾವ ಬೀರುವುದು ಕಂಡುಬಂದಲ್ಲಿ, ಅಂತಹ ಸಿಬ್ಬಂದಿಯ ಮನವಿಯನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ ಹಾಗೂ ಅವರ ಮೇಲೆ ಸೇವಾ ನಿಯಮಾನುಸಾರ ಶಿಸ್ತುಕ್ರಮವನ್ನು ಜರುಗಿಸಲಾಗುವುದು.

(ಶಂಭುಲಿಂಗಯ್ಯ)
ಸರ್ಕಾರದ ಉಪ ಕಾರ್ಯದರ್ಶಿ-2
ಸಮಾಜ ಕಲ್ಯಾಣ ಇಲಾಖೆ

<u>ಇವರಿಗೆ:-</u>

1. ಮಹಾಲೇಖಪಾಲರು, (ಎ & ಇ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.

3. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜಿನ ಎಲ್ಲಾ ಪ್ರಾಂಶುಪಾಲರಿಗೆ (ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇವರಿಂದ).
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

<u>ಪ್ರತಿಗಳು:</u>

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
3. ಸರ್ಕಾರದ ಉಪ ಕಾರ್ಯದರ್ಶಿ-2 ರವರ ಆಪ್ತ ಸಹಾಯಕರು, ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಸಕಇ 308 ಎಂಡಿಎಸ್ 2022

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು,ದಿನಾಂಕ:24.05.2022

## ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ: ಸಕಇ 308 ಎಂಡಿಎಸ್ 2022, ದಿನಾಂಕ: 11.05.2022 ರ ವರ್ಗಾವಣೆ ಮಾರ್ಗಸೂಚಿಗಳ ಪುಟ ಸಂಖ್ಯೆ: 3 ರಲ್ಲಿನ 3ನೇ ಪ್ಯಾರಾದ 4ನೇ ಕ್ರಮಾಂಕದಲ್ಲಿ " ಪತಿ-ಪತ್ನಿ ಪ್ರಕರಣದ ವರ್ಗಾವಣೆಗೆ ಅರ್ಜಿ ಸಲ್ಲಿಸುವ ಸಿಬ್ಬಂದಿಗಳು ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ವರ್ಗಾವಣೆ ಕೋರಲು ಅರ್ಹರಾಗಿದ್ದು, ಒಂದೇ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಪತಿ-ಪತ್ನಿ ಪ್ರಕರಣದಡಿ ವರ್ಗಾವಣೆಗೆ ಅವಕಾಶವಿರುವುದಿಲ್ಲ" ಎಂಬುದರ ಬದಲಾಗಿ ***ಪತಿ-ಪತ್ನಿ ವರ್ಗಾವಣೆ ಪ್ರಕರಣದಲ್ಲಿ ಒಂದು ಕರ್ತವ್ಯದ ಸ್ಥಳದಿಂದ ಇನ್ನೊಬ್ಬರ ಕರ್ತವ್ಯದ ಸ್ಥಳಕ್ಕೆ ಸಾರ್ವಜನಿಕ ಸಾರಿಗೆ ಪ್ರಯಾಣದ ಅಂತರದ ಅವಧಿಯು ಒಂದು ಘಂಟೆಯ ಮಿತಿಯನ್ನು ಮೀರಿದ್ದಲ್ಲಿ ಅಂತಹ ಪ್ರಕರಣವನ್ನು ಪರಿಗಣಿಸತಕ್ಕದ್ದು.*** ಎಂದು ತಿದ್ದಿ ಓದಿಕೊಳ್ಳತಕ್ಕದ್ದು, ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಂಭುಲಿಂಗಯ್ಯ),
ಸರ್ಕಾರದ ಉಪ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ.

**ಇವರಿಗೆ:-**

1. ಮಹಾಲೇಖಪಾಲರು, (ಎ & ಇ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
3. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜಿನ ಎಲ್ಲಾ ಪ್ರಾಂಶುಪಾಲರಿಗೆ (ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇವರಿಂದ).
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿಗಳು:**

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ: ಸಕಇ 308 ಎಂಡಿಎಸ್ 2022

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು,ದಿನಾಂಕ:25.05.2022

## ತಿದ್ದುಪಡಿ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವಸತಿ ಶಾಲೆ ಮತ್ತು ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರನ್ನು ಆನ್‌ಲೈನ್ ಕೌನ್ಸಲಿಂಗ್ ಮುಖಾಂತರ 2022-23 ನೇ ಸಾಲಿನಲ್ಲಿ ಸಾಮಾನ್ಯ ವರ್ಗಾವಣೆ ಮಾಡುವುದಕ್ಕೆ ಸಂಬಂಧಿಸಿದಂತೆ ಆದೇಶ ದಿನಾಂಕ:05.05.2022 ನ್ನು ಮುಂದುವರೆಸುತ್ತಾ, ಗಂಭೀರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವ ಅಧಿಕಾರಿ/ನೌಕರರಿಗೆ 30 ಅಂಕಗಳನ್ನು ಹೆಚ್ಚುವರಿಯಾಗಿ ನಿಗಧಿಪಡಿಸಿ, ವರ್ಗಾವಣೆ ಪ್ರಕ್ರಿಯೆಯಲ್ಲಿ ಪರಿಗಣಿಸುವಂತೆ ತಿದ್ದುಪಡಿ ಮಾಡಿ ಆದೇಶಿಸಿದೆ. ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಂಭುಲಿಂಗಯ್ಯ)
ಸರ್ಕಾರದ ಉಪ ಕಾರ್ಯದರ್ಶಿ-2
ಸಮಾಜ ಕಲ್ಯಾಣ ಇಲಾಖೆ

ಇವರಿಗೆ:-

1. ಮಹಾಲೇಖಪಾಲರು, (ಎ & ಇ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
3. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆ/ಕಾಲೇಜಿನ ಎಲ್ಲಾ ಪ್ರಾಂಶುಪಾಲರಿಗೆ (ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇವರಿಂದ).
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿಗಳು:

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.